**ವಾರ ಕಳೆದರೂ ಗೋವಿಂದನ ಪತ್ತೆ ಇಲ್ಲವಾದಾಗ ಗುರುರಾಜ ಗಾಬರಿಯಾದ. ಹಳೇ ಮನೆಗೆ ಹೋಗಿ ನೋಡಿದರೆ ಬಾಗಿಲು ತೆರೆದೇ ಇತ್ತು. ಒಳಗೆ ಹೋಗಿ ಹುಡುಕಿದ. ಗೋವಿಂದ ಅಲ್ಲಿ ಬದುಕಿದ್ದ ಎಂದು ಹೇಳಲು ಯಾವುದೇ ಕುರುಹುಗಳೂ ಇರಲಿಲ್ಲ.**

ಕಾಡುಕೊಪ್ಪಲಿಗೆ ಬಂದ ನಂತರ ಅದೇ ಮೊಟ್ಟಮೊದಲ ಬಾರಿಗೆ ಕುಡಿದ ಲೋಟವನ್ನು ತೊಳೆದು ಇಡಲೆಂದು ಎದ್ದು ಹೋದ. ಗೋವಿಂದನ ಈ ವರ್ತನೆ ಶಾರದಕ್ಕನಿಗೆ ವಿಚಿತ್ರವೆನಿಸಿ, "ಯಾವತ್ತೂ, ಇಲ್ದಿರೋ ವ್ಯಾಶ ಇವತ್ಯಾಕೆ. ಲೋಟ ತೊಳ್ಯದೇನ್ ಬ್ಯಾಡ ಇಟ್ ಹೋಗಿ" ಎಂದಳು. ಗಂಡನ ಕೈಗೆ ಗಾಯವೊಂದಾಗದಿದ್ದರೆ ತಾನೇ ಮುಂದು ನಿಂತು ಗೋವಿಂದನ ಗಂಟು ಮೂಟೆ ಕಟ್ಟಿಸುತ್ತಿದ್ದ ಶಾರದಕ್ಕ, ಈಗ ಅಸಹಾಯಕಳಾಗಿದ್ದಳು. ಹೀಗೆ ಶುರುವಾದ ಗೋವಿಂದನ ಪೂಜೆಯ ಕೆಲಸ ಶ್ಯಾಮರಾಯರ ಕೈ ವಾಸಿಯಾದ ಮೇಲೂ ಮುಂದುವರೆದು ಊರಿಗೆಲ್ಲಾ ಗೋವಿಂದ ಭಟ್ಟನಾಗಿಯೇ ಚಿರಪರಿಚಿತನಾದ. ಆರಂಭದಲ್ಲಿ ಗೋವಿಂದನ ಸೊಡ್ಡು ಕಂಡರೆ ಸಿಡುಕುತ್ತಿದ್ದ ಶ್ಯಾಮರಾಯರ ಮಗಳು ಲಕ್ಷ್ಮಿಯೂ ಬರುಬರುತ್ತಾ ಗೋವಿಂದನ ಹೆಡ್ಡತನವನ್ನು ತಮಾಷೆಯ ಸಂಗತಿಯನ್ನಾಗಿಸಿಕೊಂಡು ಅವನ ಕಾಲೆಳೆಯುವುದನ್ನು ಕಲಿತಳು.

ಪೂಜೆಯ ಮಂತ್ರವೊಂದನ್ನು ಸ್ಪಷ್ಟವಾಗಿ ಹೇಳುತ್ತಾನೆಂಬುದೊಂದನ್ನು ಬಿಟ್ಟರೆ ಗೋವಿಂದ ಭಟ್ಟ ಬಾಕಿ ವಿಚಾರಗಳಲ್ಲಿ ದಡ್ಡನೇ. ಒಮ್ಮೆ ಶ್ಯಾಮರಾಯರು ಬೆಳ್ಳಂಬೆಳಗ್ಗೆಯೇ ಮನೆಯ ಹಿಂದಿನ ಕಾಡು ಹೊಕ್ಕಿ ಅಡುಗೆಗೆಂದು ಕರಿಬೇವಿನ ಸೊಪ್ಪು ತಂದು ಮಾಮೂಲಿಯಂತೆ ದೇವರಕೋಣೆ ಪಕ್ಕದಲ್ಲಿ ಹರವಿಟ್ಟರು. ಆದರೆ, ಮಧ್ಯಾಹ್ನದಷ್ಟರಲ್ಲಿ ಶಾರದಕ್ಕನ ಕಡೆಯಿಂದ, "ಎಷ್ಟ್ ಸಲ ಹೇಳಿದ್ರೂ ಇವ್ರಿಗೆ ನೆನಪಿರಲ್ಲ, ನಿನ್ನೆನೇ ಹತ್ತು ಸಲ ಹೇಳಿದಿನಿ, ನಾಳೆ ಅಡುಗೆಗೆ ಕರಿವೇ ಸೊಪ್ ತನ್ನಿ ಅಂತ ಅದೇನ್ ಮರೀತಾರೋ" ಎಂದು ಗೊಣಗಾಟ ಶುರುವಾಗಿ ಅದದೇ ಸಾಲುಗಳು ತಿರುಗಾಮುರುಗಾ ಕಿವಿಗೆ ಬಿದ್ದಾಗ ಕಿರಿಕಿರಿಗೊಂಡ ಶ್ಯಾಮರಾಯರು, "ಬೆಳಗ್ಗೆಯೇ ತಂದಿಟ್ಟಿದ್ದೀನಿ ಮಾರಾಯ್ತಿ, ವಟವಟ ಅನ್ಬೇಡ, ಇಲ್ಲಿಟ್ಟಿದ್ದು ಎಲ್ಹೋಯ್ತು ಹಾಗಾದ್ರೆ" ಎಂದು ಮನೆಯೊಳಗೆಲ್ಲಾ ತಲಾಶು ನಡೆಸಿದರು. ದೇವರ ಮಂಟಪದಲ್ಲಿ ಸಾಲಾಗಿ ನಿಲ್ಲಿಸಿದ್ದ ಕರಿಬೇವಿನ ಎಸಳುಗಳು ಕಣ್ಣಿಗೆ ಬಿದ್ದವು. ಕರಿಬೇವನ್ನೆ ಬಿಲ್ವಪತ್ರೆ ಎಂದೆಣಿಸಿ ದೇವರಿಗೆ ಅರ್ಪಿಸಿದ ಗೋವಿಂದನ ದಡ್ಡತನಕ್ಕೆ ಶ್ಯಾಮರಾಯರು ತಲೆ ಚಚ್ಚಿಕೊಂಡರು. ಹೀಗೆ ಬುದ್ಧಿವಂತನೂ ಅಲ್ಲ, ದಡ್ಡನೂ ಅಲ್ಲದ ಗೋವಿಂದ ಸಣಪುಟ್ಟ ಯಡವಟ್ಟುಗಳನ್ನು ಮಾಡುತ್ತಾ, ತಿಂಗಳ ಮೂರು ಸಾವಿರ ಸಂಬಳಕ್ಕೆ ಪೂಜೆ ಮಾಡುತ್ತಾ, ಪುಕ್ಕಟೆ ಮನರಂಜನೆಯನ್ನು ಮನೆಮಂದಿಗೆ ನೀಡುತ್ತಾ ಹೊಟ್ಟೆ ಭರ್ತಿ ಊಟದೊಂದಿಗೆ ನಿಶ್ಚಿಂತೆಯಿಂದ ಕಾಲ ದೂಡಲು ಆರಂಭಿಸಿದ. ಮನೆಗೆ ಬಂದ ಆರಂಭದಲ್ಲಿ ಹತ್ತಾರು ನೆಪವೊಡ್ಡಿ ಹಾಲು, ಮಜ್ಜಿಗೆಯನ್ನೂ ಮುಟ್ಟದೇ ಇದ್ದ ಗೋವಿಂದ ಬರುಬರುತ್ತಾ ಊಟಕ್ಕೆ ಎರಡೆರಡು ಬಾರಿ ತುಪ್ಪ ಹಾಕಿಸಿಕೊಳ್ಳುವಷ್ಟರ ಮಟ್ಟಿಗೆ ಬದಲಾದ. ಶಾರದಕ್ಕನ ಅಡುಗೆಯ ಮುಂದೆ ಮಾಲತಿಯ ಅಡುಗೆ ಲೆಕ್ಕಕ್ಕೇ ಇಲ್ಲವೆಂದೆಲ್ಲಾ ಜರಿದು ಬಾಯಿರುಚಿ ನೀಗಿಸಿಕೊಂಡ.

ಬೆಳಗ್ಗಿನ ಪೂಜೆಯನ್ನು ಪೂರೈಸಿದರೆ ಗೋವಿಂದ ಸಂಜೆಯ ತನಕ ಹತ್ತು ಹೆಜ್ಜೆಯನ್ನೂ ಕಿತ್ತಿಡುವವನಲ್ಲ. ತೋಟಕ್ಕೆ ಹೋಗಿ ಒಂದು ಸುತ್ತು ಹಾಕಿ ಬಾ ಎಂದರೆ ಇಂಬಳ ಕಚ್ಚುತ್ತದೆ ಎಂದೂ ಹಿತ್ತಲಿಗೆ ಬರುವ ಮಂಗವನ್ನಾದರೂ ಹೆದರಿಸು ಎಂದರೆ ಮಂಗಗಳೇ ಜೋರಿವೆ ಎಂದೂ